# ಅಧ್ಯಾಯ 47

ಓಂ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ



ಛಂದ :- ಮರಣ ಕಾಲದ ಇಚ್ಛೆಯನ್ನು ಪಾಲಿಸಿದಿ ಭಕ್ತನ ಪ್ರೇಮದಿ ಶರಣು ಬಂದವಗೆ ಪಂಚಕೋಶ ವಿವೇಕವನು ನೀ ತಿಳುಹಿದಿ ಇಂತು ಆತ್ಮಜ್ಞಾನ ಬೋಧಿಸಿ ಉದ್ಧರಿಸಿದಿ  ಶರಣನ  ಇಂಥ ಭವದಿಂ ತಾರಿಸುವನಾ ಭಜಿಸಿರೈ ಗುರುರಾಜನ...

ಶ್ರೀ ಸದ್ಗುರುವೇ, ನೀನು ಅನಾದ್ಯನಂತನಿದ್ದರೂ, ಲೀಲೆಗೋಸ್ಕರ ಮೂರ್ತಿಮಂತನಾಗಿರುವಿ. ಭಕ್ತರನ್ನು ತಾರಣ ಮಾಡುವ ಉದ್ದೇಶದಿಂದ ಗುಣಗಳು ಆಟದಲ್ಲಿ ಪ್ರವರ್ತಿಸಿರುತ್ತಿ. ಅನೇಕ ಭಕ್ತರೆಂಬ ರೂಪಗಳಿಂದಲೂ ನೀನೇ ಇರುತ್ತಿ. ಅವರನ್ನು ನಿನ್ನ ಸುತ್ತಲೂ ಕರೆದುಕೊಂಡು ನೀನು ಇರುವಿ. ಸಂಕಟ ಬಂದಾಗ ರಕ್ಷಿಸೆಂದು ನಿನ್ನನ್ನು ಕರೆದ ಕೂಡಲೇ ನೀನು ಓಡಿ ಬರುವಿ. ಅವರ ಶೋಭೆಯಿಂದ ನೀನು ಶೋಭಿಸುತ್ತಿ. ಅವರ ಸುಖದಿಂದ ನೀನು ಸುಖಿಸುತ್ತಿ, ಅವರ ಭಾವದಿಂದ ನೀನು ದೇವನಾಗಿದ್ದಿ, ಇಲ್ಲವಾದರೆ ನಿರ್ಗುಣತ್ವದಲ್ಲಿಯೇ ಇರುತ್ತಿದ್ದಿ. ನಿರ್ಗುಣದಲ್ಲಿ ಇರುತ್ತಿದ್ದ ನಿನ್ನನ್ನು ಭಕ್ತರು ಭಾವಬಲದಿಂದ ಇಲ್ಲಿಗೆ ತಂದುಕೊಂಡರು. ಅವರ ಪುಣ್ಯ ಪ್ರಭಾವದಿಂದ ಅಜನ್ಮನಾದಂಥ ನಿನಗೆ ಜನ್ಮವು ಪ್ರಾಪ್ತವಾಯಿತು. ನಿನ್ನ ಕಾರ್ಯವಾದಂಥಾ ಭಕ್ತೋದ್ಧಾರಣವನ್ನು ನೀನು ನಾನಾ ಉಪಾಯಗಳಿಂದ ಸ್ವತಃ ಮಾಡುವಿ. ಯಾರ್ಯಾರ ಅಧಿಕಾರವು ಹ್ಯಾಗೆಂಬುವದು ತಿಳಿದು, ಅವರಿಗೆ ಯೋಗ್ಯವಾದ ಬೋಧವನ್ನು ಕೊಡುವಿ.

ಇದರ ವಿನಃ ನೀನು ಎಲ್ಲಾ ಪ್ರಾಣಿಗಳ ಮೇಲೆ ಸಮಾನ ದಯಾವಂತನಾಗಿರುತ್ತಿ. ಪಂಡಿತರನ್ನೂ ಅಜ್ಞಾನಿಗಳನ್ನೂ ಕಾಲಕ್ರಮದಿಂದ ನೀನು ಉದ್ಧರಿಸುವಿ. ಇರಲಿ. ಈಗ ಕಥಾನುಸಂಧಾನವನ್ನು ಕೇಳಿರಿ. ಈ ಸಿದ್ಧಾರೂಢ ಸದ್ಗುರು ದಯಾಘನನು ಸಿದ್ದಾಶ್ರಮದಲ್ಲಿ ಭಕ್ತರಿಗೋಸ್ಕರ ಇರುವನು. ಒಂದಾನೊಂದು ದಿವಸ ಒಬ್ಬ ಸದ್ಭಕ್ತನು ಸದ್ಗುರುಗಳಿಗೆ ನಮಸ್ಕರಿಸಿ, - " ಹೇ ಸ್ವಾಮಿ, ನಮ್ಮ ಮನೆಯಲ್ಲಿ ಒಬ್ಬ ವೃದ್ಧ ಬ್ರಾಹ್ಮಣನು ದೂರ ದೇಶದಿಂದ ಬಂದಿರುತ್ತಾನೆ. ಅವನು ವ್ಯಾಧಿಯಿಂದ ಅತ್ಯಂತ ಪೀಡಿತನಾಗಿದ್ದು, ಆತನ ಪ್ರಾಣಾಂತವು ಸಮೀಪ ಬಂದಂತೆ ಕಾಣಿಸುತ್ತದೆ. ಆದರೆ ನಿನ್ನ ನಾಮವನ್ನೇ ಕಂಠದೊಳಗೆ ಧಾರಣಮಾಡಿಕೊಂಡು ನಿನ್ನ ದರ್ಶನದ್ದೆಶೆಯಿಂದ ತಳಮಳಿಸುತ್ತಿದ್ದಾನೆ," ಎಂದು ಪ್ರಾರ್ಥಿಸಿದ ಕರುಣಾಪರ ವಚನಗಳನ್ನು ಕೇಳಿ, ತತ್ಕಾಲವೇ, ಸಿದ್ಧರಾಜನು ಆತನ ಮನೆಗೆ ಹೋದರು. ಮನೆಯಲ್ಲಿ ಪ್ರವೇಶಿಸುವಾಗ, ಆ ವೃದ್ಧ ಬ್ರಾಹ್ಮಣನು ಬಂದು ಸ್ವಾಮಿಯವರಿಗೆ ನಮಸ್ಕರಿಸಿ - 'ಹೇ ದಯಾಳುವಾದ

ಸಿದ್ಧರಾಯನೇ, ನಿನ್ನನ್ನು ಕಂಡಾಕ್ಷಣ ದೇಹದಲ್ಲಿ ಶಕ್ತಿ ಬಂತು. ನಿನ್ನ ಭೆಟ್ಟಿಗೋಸ್ಕರವೇ ಪ್ರಾಣವು ನಿಂತಿದೆ. ಭಕ್ತಸಖನೇ, ಬೇಗನೇ ಪ್ರಾಪ್ತನಾದಿ, ನನ್ನ ಹೆಸರು ಸುಬ್ಬಯ್ಯಶಾಸ್ತ್ರಿ, ಅಮರಗುಂಡ ಮಲ್ಲಿಕಾರ್ಜುನ ಕ್ಷೇತ್ರದಲ್ಲಿ ನಮ್ಮ ನಿಮ್ಮ ಭೆಟ್ಟಿ. ಗುರುಗಜದಂಡ ಸ್ವಾಮಿಯವರ ಸಭೆಯಲ್ಲಿ ನೀನು ನನ್ನ ವಾದವನ್ನು ಖಂಡನ ಮಾಡಿದಿ. ನಾನು ಒಬ್ಬ ದೊಡ್ಡ ಪಂಡಿತರೆಂಬ ದುರಭಿಮಾನವು ನನಗಿತ್ತು. ಅದನ್ನೆಲ್ಲಾ ನೀನು ಝಾಡಿಸಿ ತೆಗೆದುಬಿಟ್ಟೆ. ಅಂದಿನಿಂದ ನೀನು ಮಾನ್ಯನಾದಿ. ಕಾಲಾಂತರದಲ್ಲಿ ನನಗೆ ಅನುತಾಪ ಹುಟ್ಟಿ, ನಿನ್ನ ದರ್ಶನೋತ್ಸುಕನಾದೆ. ನೀನು ತೀರ್ಥಯಾತ್ರೆಗೆ ಹೊರಟಿರುವಿ, ಎಂದು ಕೇಳಿದೆ. ನಾನಾದರೂ ವೈರಾಗ್ಯಭರಿತನಾಗಿ, ನಿನ್ನ ದರ್ಶನೇಚ್ಛೆಯಿಂದ ಕ್ಷೇತ್ರಗಳನ್ನು ಸಂಚರಿಸುತ್ತಾ ಕಟ್ಟಕಡೆಗೆ ಇಲ್ಲಿಗೆ ಬಂದೆನು. ಆದರೆ ವ್ಯಾಧಿಯಿಂದ ಶರೀರ ಪೀಡಿತವಾಗಿ, ಈಗ ಪ್ರಾಣಾಂತವು ಬಂದೊದಗಿರುವದು. ನಿನ್ನ ದರ್ಶನವಾಗುವ ತನಕ ಈಶ್ವರನು ನನ್ನ ಪ್ರಾಣವನ್ನು ರಕ್ಷಿಸಿದನು. ಈಗ ಸದ್ಗುರುನಾಥನಾದ ನೀನು

ಭೆಟ್ಟಿಯಾದಿಯಂದು ಬಹಳ ಆನಂದವಾಯಿತು. ನನ್ನ ಜನ್ಮಕ್ಕೆ ಧನ್ಯತೆಯು ಬಂತು. ಮನಸ್ಸಿನಲ್ಲಿ ನಿಶ್ಚಿಂತನಾದೆನು. ಜಗತ್ತಿನೊಳಗೆ ಇದ್ದು, ಅದಕ್ಕೆ ಪ್ರತ್ಯೇಕವಾಗಿರುವ ನಿನ್ನ ಸ್ವರೂಪವು ನನ್ನಿಂದ ತಿಳಿಯಲಾಗದು. ಅಜಅಜಿತ ನಿರ್ವಿಕಾರನಾಗಿರುವಂಥಾ ನೀನು ನಿರ್ಗುಣನಿದ್ದಿ ಎಂದು ವೇದವು ಹೇಳುತ್ತದೆ. ನಿನ್ನ ನಿರ್ಗುಣ ಸ್ವರೂಪವನ್ನು ತಿಳಿಯುವುದಕ್ಕೋಸ್ಕರ ನನ್ನ ಮನಸ್ಸು ಬಹಳ ಲವಲವಿಸುತ್ತದೆ. ದಯಾಘನನಾದ ನೀನು ಕೃಪೆ ಮಾಡಿದ್ದಾದರೆ, ತತ್ಕಾಲವೇ ನಾನು ಜ್ಞಾನವನ್ನು ಹೊಂದುವೆನು. ಈಗ ನಾನು ಪ್ರಾರ್ಥಿಸುವದೇನೆಂದರೆ, - ಈ ದೇಹದಲ್ಲಿ ನನಗೆ ಜ್ಞಾನಾಧಿಕಾರವಿಲ್ಲವೆಂದು, ಹೇ ಸದ್ಗುರೋ , ನೀನು ಹೇಳುವುದಾದರೆ, ನನಗೆ ಇಂತದ್ದೊಂದು ಪುನರ್ಜನ್ಮ ಕೊಡಬೇಕು. ಅದೆಂಥಾದ್ದೆಂದರೆ - ನಾನು ನಿತ್ಯದಲ್ಲಿಯೂ ನಿನ್ನ ಸನ್ನಿಧಿಯಲ್ಲಿಯೇ ಇದ್ದು, ನಿಶ್ಚಯವಾಗಿ ನಿನ್ನ ಸೇವೆಯು ನನಗೆ ಘಟಿಸಬೇಕು. ಇದೇ ನನ್ನ ಕಡೇ ಹೇತುವಾಗಿರುತ್ತದೆ. ಈಗಲಾದರೆ ದೇಹಾಂತ್ಯವಾಗಲಿ." ಎಂದು ಪ್ರಾರ್ಥಿಸಿದ

ವಾಕ್ಯಗಳನ್ನು ಕೇಳಿ, ಸದ್ಗುರುರಾಜರು ಕರುಣೆಯಿಂದ ದ್ರವಿಸುವಂಥವರಾಗಿ, ಗದ್ಗದಿತ ಕಂಠದಿಂದ ಶಾಸ್ತ್ರಿಯನ್ನು ಕುರಿತು ಅನ್ನುತ್ತಾರೆ - 'ಹೇ ಸುಬ್ಬಯ್ಯಶಾಸ್ತ್ರಿಯೇ, ಜ್ಞಾನಖಣಿಯೇ ನೀನು ಅಂತ್ಯಕಾಲದಲ್ಲಿ ಇಂಥಾ ಸದ್ವಾಸನೆಯನ್ನು ಹಿಡಿದು ದೇಹ ತ್ಯಜಿಸಿ ಹೋಗುವಿ, ಎಂಬ ಕಾರಣದಿಂದ ನೀನು ಧನ್ಯನಾದಿ. || ಶ್ಲೋಕ || ಯಂಯಂವಾಪಿ ಸ್ಮರನ್ ಭಾವಂ ತ್ಯಜತ್ಯಂತೆ ಕಲೇವರಂ। ತಂತಮೇವೈತಿ ಕೌಂತೇಯ ಸದಾ । ತದ್ಭವಾ ಭಾವಿತಃ || 1 ಟೀಕೆ|| ಶ್ರೀ ಮದ್ಭಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನನ್ನು ಕುರಿತು ಹೇಳುತ್ತಾನೆ- “ಯಾರ್ಯಾರು ಯಾವ್ಯಾವ ಭಾವವನ್ನು ಸ್ಮರಿಸಿ, ಅಂತ್ಯಕಾಲದಲ್ಲಿ ದೇಹತ್ಯಾಗವನ್ನು ಮಾಡುವರೋ, ಯಾವಾಗಲೂ ಆ ಭಾವವನ್ನೇ ಭಾವಿಸುತ್ತಿರುವ ಅವನು ಅದನ್ನೇ ಹೊಂದವನು. ಈ ದೇಹವನ್ನು ಬಿಟ್ಟ ಮೇಲೆ ಅಲ್ಪ ಕಾಲದಲ್ಲಿಯೇ, ನೀನು ಮತ್ತೊಂದು ಶರೀರವನ್ನು ಪಡೆದು, ಅಲ್ಲಿ ನಿನಗೆ ಈ ಗುರುಭಕ್ತಿಯ ಸ್ಮೃತಿಯಾಗಿ, ನನ್ನ ಕಡೆಗೆ ಬರುವಿ.” ಈ ಪ್ರಕಾರ ಸದ್ಗುರು ವಚನವನ್ನು ಶಾಸ್ತ್ರಿಯು ಕೇಳಿ, ಆ

ದಿವ್ಯರೂಪವನ್ನೇ ನೋಡುತ್ತಾ, ಮುಖದಿಂದ ಸಿದ್ಧನಾಮವನ್ನು ಉಚ್ಚರಿಸುತ್ತ ಪ್ರಾಣವನ್ನು ತ್ಯಜಿಸುವಂಥವನಾದನು. ಅನಂತರ ಸರ್ವ ಬ್ರಾಹ್ಮಣರು ಕೂಡಿ, ಶಾಸ್ತ್ರೀಯ ಅಂತೇಷ್ಟಿಯನ್ನು ಮಾಡಿದರು. ಸಿದ್ಧಾರೂಢರನ್ನು ಪೂಜಿಸಿ, ಮಠಕ್ಕೆ ಕಳುಹಿಸಿಕೊಟ್ಟರು. ಬ್ರಹ್ಮನಿಷ್ಠರು, ಪಂಡಿತರು ಆಗಿದ್ದ ಮಡಿವಾಳ ಸ್ವಾಮಿಯವರು ಗರಗ ಗ್ರಾಮದಲ್ಲಿರುತ್ತಿರುವಾಗ ನಿತ್ಯದಲ್ಲಿಯೂ ಅವರ ಸೇವೆ ಮಾಡುತ್ತಿರುವ ಶಿವಬಸಪ್ಪನೆಂಬ ಗೃಹಸ್ಥನಿದ್ದನು. ಶಿವಬಸಪ್ಪನು ಹಗಲು ಹೊತ್ತು ನೇಯುತ್ತಿದ್ದು, ಸಂಜೆ ಹೊತ್ತಿಗೆ ಸ್ವಾಮಿಯವರ ಸೇವೆಗೋಸ್ಕರ ಹೋಗುತ್ತಿದ್ದನು. ರಾತ್ರಿಯೆಲ್ಲಾ ಮಠದೊಳಗೆ ಕಳೆದು, ಮರುದಿನ ಬೆಳಿಗ್ಗೆ ಮನೆಗೆ ಬರುತ್ತಿರುವನು. ಶಿವಬಸಪ್ಪನು ನಿತ್ಯ ಭಜನ, ಕೀರ್ತನ, ವೇದಾಂತ ಶ್ರವಣ ಮುಂತಾದ್ದು ಮಾಡುತ್ತ ಇದ್ದು, ದೇಹಾಭಿಮಾನವನ್ನು ಬಿಟ್ಟು, ಕಠಿಣವಾದ ಗುರುಸೇವೆಯನ್ನು ಮಾಡುತ್ತಿದ್ದನು. ಆತನ ಪತ್ನಿಯಾದ ಶಿವಲಿಂಗವ್ವನು ಬಹು ಆದರದಿಂದ ಪತಿಯ ಮತ್ತು ಗುರುವಿನ ಸೇವೆ ಮಾಡುತ್ತಿದ್ದಳು. ಈ ದಂಪತಿಗಳ ಉತ್ತಮವಾದ

ಸದ್ಭಾವವನ್ನು ತಿಳಿದು, ಸದ್ಗುರುರಾಯನು ಸಂತುಷ್ಟನಾಗಿ, ಶಿವಬಸಪ್ಪನನ್ನು ಕುರಿತು ಒಂದು ದಿನ ಕೇಳುತ್ತಾನೆ, - "ಶಿವಬಸಪ್ಪನೇ, ನಿನ್ನ ಮನಸ್ಸಿನ ಹೇತು ಏನಿರುವದು ?" ಈ ಪ್ರಕಾರ ಮಡಿವಾಳಪ್ಪನವರು ಕೇಳಿದ್ದಕ್ಕೆ ಶಿವಬಸಪ್ಪನು 'ಹೇ ಸ್ವಾಮಿ ನಿನ್ನ ಸೇವೆ ಇಷ್ಟು ದಿವಸ ಪರ್ಯಂತ ಮಾಡುತ್ತಿರಲು, ಈಗ ನನಗೆ ಸಂಸಾರವು ಸೇರದಂತಾಗಿದೆ. ಸೇವೆಯ ಹೊರತು ಎರಡನೇ ಇಚ್ಛೆಯೇ ನನ್ನ ಮನಸ್ಸಿನಲ್ಲಿರುವದಿಲ್ಲ, "ಎಂದು ಉತ್ತರ ಕೊಟ್ಟನು. ಆಗ ಸ್ವಾಮಿಯವರು ಅದೇ ಅಭಿಪ್ರಾಯವನ್ನು ಶಿವಲಿಂಗವ್ವಗೆ ವಿಚಾರಿಸಿದ್ದಾಗ ಅವಳು - ನಮ್ಮಲ್ಲಿ ಸಂತತಿ ಇಲ್ಲವಾದ್ದರಿಂದ, ಒಬ್ಬ ಸುಪುತ್ರನಾಗಬೇಕೆಂದು ನನ್ನ ಮನಸ್ಸಿನಲ್ಲಿ ಇಚ್ಛೆ ಇರುವದು," ಎಂದು ಅಂದದ್ದು ಕೇಳಿ, ಸ್ವಾಮಿಯವರು ಆ ದಂಪತಿಗಳನ್ನು ಕುರಿತು - "ಈ ಪ್ರಕಾರದ ಇಚ್ಛೆಯು ಪೂರ್ಣವಾಗಿ, ನಿಮ್ಮಲ್ಲಿ ಜ್ಞಾನವಂತನಾಗುವ ಪುತ್ರನು ಉತ್ಪನ್ನನಾಗುವನು," ಎಂದು ನುಡಿದರು. ಕೆಲವು ಕಾಲದ ನಂತರ ಶಿವಬಸಪ್ಪನ ಸ್ತ್ರೀಯು ಗರ್ಭಿಣಿಯಾಗಿ, ನವಮಾಸಾಂತ್ಯದಲ್ಲಿ ಸುಂದರನಾದ

ಪುತ್ರನನ್ನು ಪ್ರಸವಿಸಿದಳು. ಆಗ ಒಬ್ಬ ಜೋಯಿಸನು ಬಂದು ಮಗುವಿನ ಲಕ್ಷಣಗಳನ್ನು ನೋಡಿ, - "ಈತನು ಈಶ್ವರದತ್ತ ಪುತ್ರನಿದ್ದಾನೆ, ಆದ ಕಾರಣ ಈತನಿಗೆ ಶಿವಪುತ್ರನೆಂದು ಹೆಸರಿಡತಕ್ಕದ್ದು. ಈತನೊಬ್ಬ ಯೋಗ ಭ್ರಷ್ಟನು ಜನ್ಮಕ್ಕೆ ಬಂದಿರುವವನು. ನಿರ್ದುಷ್ಟನಾದ ಇವನು, ಮುಂದೆ ಸದ್ಗುರು ಕೃಪೆಯಿಂದ ಬ್ರಹ್ಮನಿಷ್ಟನಾಗಿ ಕುಲ ಉದ್ಧಾರಕನಾಗುವನು," ಎಂದು ಹೇಳಿ ಹೋದನು. ದಿನೇ ದಿನೇ ಆ ಬಾಲಕನ ಬೆಳೆಯುತ್ತಾ, ಹನ್ನೆರಡು ವರ್ಷ ವಯಸ್ಸಿನಲ್ಲಿ ಆತನಿಗೆ ಲಗ್ನ ಮಾಡಿದರು. ಆದರೆ ಹದಿನೈದು ವರ್ಷ ವಯಸ್ಸಾದಾಗ ಮಹಾ ವೈರಾಗ್ಯಪ್ರಾಪ್ತವಾಗಿ, ಸ್ತ್ರೀಯು ಮಾತೃಗೃಹದಲ್ಲಿರುವಾಗ ಶಿವಪುತ್ರನು ತಂದೆ ತಾಯಿಗಳಿಗೆ ಹೇಳದೆ, ಮನೆ ಬಿಟ್ಟು ಹೊರಟು, ನೆಟ್ಟಗೆ ಹುಬ್ಬಳ್ಳಿಗೆ ಬಂದನು. ಶ್ರೀ ಸಿದ್ಧಾರೂಢರ ಬಳಿಗೆ ಬಂದು ಅವರ ಚರಣಗಳನ್ನು ದೃಢವಾಗಿ ಹಿಡಿದು, "ದಯಾಳುಗಳಾಗಿಯೂ, ಕರುಣಾಕರನಾಗಿಯೂ ಇರುವ ಸದ್ಗುರುವೇ ನಿನ್ನನ್ನು ಕುರಿತು ನಾನು ಶರಣು ಬಂದಿರುತ್ತೇನೆ. ನಿನ್ನ ಹೊರತು ಅನ್ಯರಕ್ಷಕರಿಲ್ಲವಾದ್ದರಿಂದ, ಹೇ ದೀನನಾಥನೇ,

ನನ್ನನ್ನು ಈ ಭವದೊಳಗಿಂದ ತಾರಿಸುವಂಥವನಾಗು. ನನ್ನನ್ನು ನಿನ್ನ ಪಾದದಲ್ಲಿಯೇ ಇರಿಸಿಕೋ." ಎಂದು ಪ್ರಾರ್ಥಿಸಿದನು. ಆಗ ದಯಾಳುವಾದ ಸದ್ಗುರು ಸಿದ್ಧರಾಯರು, ಆತನನ್ನು ಎತ್ತಿ ಅಭಯವನ್ನು ಕೊಟ್ಟು - "ನೀನು ಇಲ್ಲಿ ನಿರ್ಭಯ ಚಿತ್ತದಿಂದಿರು. ಇಲ್ಲಿ ನಿನಗೆ ಸಂಸಾರ ಭಯವಿಲ್ಲ," ಎಂದು ನುಡಿದರು. ಸದ್ಗುರುಗಳು ಇವನ ಗುರ್ತು ಹಿಡಿದರು. ಅಂತಕಾಲದ ಇಚ್ಛೆಯನ್ನು ಪೂರೈಸಿಕೊಳ್ಳಲಿಕ್ಕೆ . ಪುನರ್ಜನ್ಮವನ್ನು ಪಡೆದುಕೊಂಡು ಬಂದು ಸುಬ್ಬಯ್ಯಶಾಸ್ತ್ರಿಯೇ ಇವನು ಎಂದು ಮನಸ್ಸಿನಲ್ಲಿ ತಿಳಿದುಕೊಂಡರು. ಈತನಿಗೆ ವಿದ್ಯಾ ಸಂಸ್ಕಾರವಿರುವದರಿಂದ ಚತುರನಾದ ಪಂಡಿತನಾಗುವನು, ಮತ್ತು ವೇದಾಂತ ವಿಚಾರವನ್ನು ಮಾಡಿ, ಈತನ ಬ್ರಹ್ಮಜ್ಞಾನವನ್ನು ಪಡೆಯುವುದು ಎಂದು ಸಿದ್ಧಾರೂಢರು ತಿಳಿಯುವಂಥವರಾದರು. ಶಿವಪುತ್ರನು ಸಂಸ್ಕೃತ ವಿದ್ಯಾ ಕಲಿಯುವದಶೆಯಿಂದ, ಸದ್ಗುರುಗಳು ಆತನನ್ನು ಸಂಸ್ಕೃತ ಪಾಠಶಾಲೆಗೆ ಕಳುಹಿಸಿದರು. ಅಲ್ಲಿ ಶೀಘ್ರದಿಂದ ವಿದ್ಯಾ ಪೂರ್ಣಮಾಡಿ, ಆತನು ಸರ್ವ ವೇದಾಂತ ಗ್ರಂಥಗಳನ್ನು

ತಾನೇ  ಅಭ್ಯಾಸಿಸಿದನು. ಸರ್ವ ವೇದ ವೇದಾಂತದಲ್ಲಿ ಪಾರಂಗತನೂ, ಷಟ್ಶಾಸ್ತ್ರಗಳಲ್ಲಿ ಬಹು ನಿಪುಣನೂ, ಆದಮೇಲೆ ಶಿವಪುತ್ರನು ಸನ್ಯಾಸಾಶ್ರಮವನ್ನು ಗುರುಗಳಿಂದ ಸ್ವೀಕರಿಸಿ, ತ್ರಿಕರಣ ನಿಯತನಾದನು. ಒಂದು ದಿನ ಶಿವಪುತ್ರನನ್ನು ಕುರಿತು, ಸಿದ್ಧಾರೂಢರು, - "ಈ ಕಲ್ಲನ್ನು ಎತ್ತಿಕೊಂಡು ತೀವ್ರವಾಗಿ ಓಡು," ಎಂದು ಹೇಳಿದ ಕೂಡಲೇ ಆತನು ಹಾಗೆಯೇ ಮಾಡಿದನು. ಕಲ್ಲು ಬಹಳ ಭಾರವಾಗಿದ್ದು, ಓಡುವಾಗ ಶಿವಪುತ್ರನು ಬಹಳ  ಸೋತು ಹೋಗಿ, ಎಡವಿ ಭೂಮಿಗೆ ಬಿದ್ದನು. ಶರೀರವೆಲ್ಲಾ ಘಾಯವಾಗಿ, ಆತನು ದುಃಖದಿಂದ ಬಹು ಖಿನ್ನನಾದನು. ಆತನನ್ನು ನೋಡಿ, ಸದ್ಗುರುಗಳು, - "ನಿನಗ್ಯಾಕೆ ದುಃಖವಾಗುವದು, ಮ್ಲಾನವದನನಾಗಿ ಯಾಕಿರುವಿ ?" ಎಂದು ಕೇಳಿದ್ದಕ್ಕೆ, ಶಿವಪುತ್ರನು , "ನನಗೆ ಮೈಯೆಲ್ಲಾ ನೋಯುತ್ತದೆ," ಎಂದು ಉತ್ತರ ಕೊಟ್ಟನು. ಆಗ ಸದ್ಗುರುಗಳು, - "ನೀನು ದೇಹವೇ ನಾನೆಂದು ತಿಳಿಯುವದರಿಂದ ದುಃಖ ಭೋಗಿಸಬೇಕಾಗುವದು. ದೇಹಕ್ಕೆ  ದುಃಖವು ಸಹಜವಾಗಿರುತ್ತದೆ. ಆದರ ಅಭಿಮಾನ

ಹಿಡಿಯುವದರಿಂದ ನಿನಗೆ ದುಃಖವು ಭಾಸಿಸುತ್ತದೆ. "ಈ ದೇಹವು' ಎಂದು ನೀನು ತಿಳಿಯುವಾಗ, ದೇಹ ನೀನು ಹ್ಯಾಗಾಗುವಿ? ಇಲ್ಲಿ ಬಿದ್ದಿರುವ ಕಲ್ಲು ನೀನು ನೋಡುತ್ತಿ, ಆದರೆ ಅದೇ ತಾನೆಂದು ನೀನು ಹೇಳಲೊಲ್ಲಿ. ಇದೇ ಪ್ರಕಾರ ಜಡವಾಗಿರುವ ಈ ದೇಹವನ್ನು ಆತ್ಮತ್ವದಿಂದ ಹ್ಯಾಗೆ ತಿಳಿಯುವಿ?" ಎಂದು ಹೇಳಿದ್ದು ಕೇಳಿ ಶಿವಪುತ್ರನು ವಿಚಾರ ಮಾಡಲಿಕ್ಕೆ ಆರಂಭಿಸಿದನು. ನಿತ್ಯ ಏಕಾಂತದಲ್ಲಿ ಹೋಗಿ, ಈ ಸದ್ಗುರು ವಚನವನ್ನು ಮನನ ಮಾಡುತ್ತಿದ್ದು, - "ನಾನು ದೇಹವು ಅಲ್ಲ, ಎಂದು ಗುರುಗಳನ್ನುತ್ತಾರೆ, ಜಡತ್ವದಿಂದ ಅದು ನನಗೆ ಪ್ರತ್ಯೇಕವಾಗಿರುತ್ತದೆ. ಹಾಗಾದರೆ ಇಂದ್ರಿಯಗಳು ನಾನಿದ್ದು ಚೇಷ್ಟಿಸುತ್ತೇನೆ" ಎಂದು ತಿಳಿದನು. ಒಂದು ವರ್ಷದತನಕ ಮನನ ಮಾಡುತ್ತ, ಇದನ್ನೇ ನಿಶ್ಚಯ ಮಾಡುವಂಥವನಾದನು. ಸದ್ಗುರುನಾಥನಾದರೂ ಈ ಪ್ರಕಾರ ಆತನ ಭಾವವನ್ನು ತಿಳಿದು, ಏನು ಮಾಡಿದರು, ಅಂದರೆ, ಮೆಣಸಿನ ಕಾಳು ಜಜ್ಜಿ ಅದರ ನೀರು ಸ್ವಲ್ಪ ತಯಾರಿಸಿಕೊಂಡು, ಶಿವಪುತ್ರನನ್ನು ಸಮೀಪ ಕರೆದು, ಅಕಸ್ಮಾತ್ತಾಗಿ ಅವರ

ಕಣ್ಣೊಳಗೆ  ಆ ನೀರನ್ನು ಚೆಲ್ಲಿದರು. ಆಗ ಆತನು "ಕಣ್ಣು ಉರಿಯುತ್ತದೆ.' ಎಂದು ಕಣ್ಣು ಒರಸಿಕೊಳ್ಳುತ್ತ ಅಂದನು. ಆಗ ಸಿದ್ಧಾರೂಢರು - "ಕಣ್ಣು ಉರಿಯುವದನ್ನು ನೀನು ಅರಿಯುವರಿಂದ, ನೀನು ಕಣ್ಣು ಹ್ಯಾಗಾಗುವಿ, ನನಗೆ ಹೇಳು, ನೀನು ಇಂದ್ರಿಯಗಳೇ  ತಾನೆಂದು ಹೇಳುವುದಾದರೆ, ಹತ್ತು ಇಂದ್ರಿಯಗಳಿರುತ್ತವೆ. ಇವುಗಳ ಪೈಕಿ ನೀನು ಯಾವ ಇಂದ್ರಿಯ ಇದ್ದಿ, ಅಥವಾ ಹತ್ತು ಇಂದ್ರಿಯಗಳು ನೀನೊಬ್ಬನೇ ಇದ್ದೀಯೋ ? ಎಂದು ಹೇಳಿದ್ದು ಕೇಳಿ, ಶಿವಪುತ್ರನು  ತನ್ನೊಳಗೆ ವಿಚಾರಿಸುತ್ತಾನೆ- "ಸತ್ಯವಾಗಿ ಮನಸ್ಸು  ಒಂದು ಎಲ್ಲಾ ಇಂದ್ರಿಯಗಳ ಚಾಲಕವಾಗಿರುತ್ತದೆ. ಆದ್ದರಿಂದ ನಿಜವಾಗಿ ನಾನು ಮನಸ್ಸು  ಇರುವೆನು, ಯಾಕೆಂದರೆ ಆ ನನ್ನಿಂದ ಎಲ್ಲಾ ಸಂಕಲ್ಪ  ವಿಕಲ್ಪಾದಿಗಳೂ, ಇಂದ್ರಿಯ ವ್ಯಾಪಾರಗಳು ಉಂಟಾಗುತ್ತವೆ. ಮತ್ತು ಎಲ್ಲಾ ವೃತ್ತಿರೂಪದಿಂದ ನಾನೇ ಇದ್ದೇನೆ. " ಈ ಪ್ರಕಾರ ಪುನಃ ಒಂದು ವರ್ಷ ಪರ್ಯಂತ ಮನನಮಾಡಿ ಮನವೇ ತಾನೆಂಬುದಾಗಿ ನಿರ್ಧರಿಸಿದನು. ಹೀಗಿರುತ್ತಾ  ಒಂದಾನೊಂದು ದಿವಸ, ಸದ್ಗುರುಗಳು ಆತನನ್ನು

ಕರೆದು  ಏನೂ ಇದ್ದಿ, ನನಗೆ ಹೇಳು, "ಎಂದು ಕೇಳಿದಾಗ, ಶಿವಪುತ್ರನು, -"ನಾನೂ ಸಂಕಲ್ಪ ವಿಕಲ್ಪ ಮಾಡುತ್ತೇನೆ.ನನಗೆ ಪುಣ್ಯ, ಪಾಪಗಳು, ಸರ್ವತಾಪಗಳೂ ಆಗುವವದರಿಂದ ಇವಕ್ಕೆ ಸ್ಥಾನವಾಗಿರುವ ಮನವೇ ನಾನು," ಎಂದು ಉತ್ತರ ಕೊಟ್ಟನು. ಅದಕ್ಕೆ ಸದ್ಗುರುಗಳು, -"ಇಂಥಾ ವಿಕಾರಯುಕ್ತವಾದ ಮನಸ್ಸಿನ ಎಲ್ಲಾ ವೃತ್ತಿಗಳನ್ನು ಇಂಥಿಂಥವು ಎಂದು ನೀನು ನಿರ್ಧಾರ ಮಾಡುತ್ತಿ. ಇಂಥವನಾದ ನೀನು ಯಾರು ಎಂದು ವಿಚಾರ ಮಾಡಿ ನನಗೆ ಹೇಳು, " ಎಂದು ಅಂದರು. ಅನಂತರ ಶಿವಪುತ್ರನು ಏಕಾಂತದಲ್ಲಿ ಹೋಗಿ ಮತ್ತೊಮ್ಮೆ ವರ್ಷ ತನಕ ಮನನ  ಮಾಡುತ್ತಿದ್ದು, - "ವೃತ್ತಿ ಜಾಲವನ್ನು ನಾನೇ ನಿಶ್ಚಯಿಸಿರುತ್ತಿರುವೆನು. ಆದ್ದರಿಂದ ನಾನು ಬುದ್ಧಿ ಇರುತ್ತೇನೆ. ಸುಖ ದುಃಖಗಳನ್ನು ನಾನು ತಿಳಿಯುತ್ತೇನೆ. ಕರ್ತಾಭೋಕ್ತಾ ಎಂಬವನಾಗಿ ನಾನೇ ಇದ್ದೇನೆ. ಆದ್ದರಿಂದ ನಾನು ಬುದ್ಧಿ ಇದ್ದೇನೆ ಎಂದು ನಿರ್ಣಯಿಸಿದ್ದನ್ನು. ವರ್ಷಾಂತ್ಯದಲ್ಲಿ ಶಿವಪುತ್ರನು ಸದ್ಗುರುಗಳ ಕಡೆಗೆ ಹೋಗಿ, - 'ನಾನು ನಿಶ್ಚಯವಾಗಿ ಬುದ್ಧಿ ಇದ್ದೇನೆ," ಅಂದನು. ಆಗಲೇ ಸದ್ಗುರುಗಳು

ಏನೊಂದು ಮಾತನಾಡದೆ, ಏನು ಮಾಡಿದನೆಂದರೆ – "ಒಂದು ದಿನ ಪ್ರಭಾತಕಾಲದಲ್ಲಿ ಶಿವಪುತ್ರನು ಎಚ್ಚರವಾಗುವ ಮೊದಲು, ಸಿದ್ಧರು ಅವನ ಸಮೀಪ ಬಂದು ಬೆನ್ನಿನ ಮೇಲೆ ಥಪ್ಪರಿಸಿದರು. ಆತನು ಗಡಬಡಿಸಿ ಎದ್ದಕೂಡಲೇ ಅವನಿಗೆ ವಿಚಾರಿಸುತ್ತಾರೆ - "ಇಷ್ಟು ಹೊತ್ತಿನ ತನಕ ನೀನು ಏನು ಅನುಭವಿಸುತ್ತ ಇದ್ದಿ, ನನಗೆ ಹೇಳು," ಎಂದು ಕೇಳಲು, ಆತನು - "ನಾನು ಏನೇನು ಅರಿಯುತ್ತಿದ್ದಿಲ್ಲ. ನನ್ನ ಅನುಭವಕ್ಕೆ ಏನೇನೋ ಬಂದಿಲ್ಲ," ಎಂದು ಪ್ರತ್ಯುತ್ತರ ಕೊಟ್ಟನು. ಅದಕ್ಕೆ ಸದ್ಗುರುಗಳು, - 'ತಾನು ಬುಧ್ಧಿಯೆಂದು ನೀನು ಹೇಳುವಿ. ಹಾಗಾದರೆ ನೀನು ಎಲ್ಲಿದ್ದಿ ?" ಎಂದು ಕೇಳಿದ್ದಕ್ಕೆ, ಶಿವಪುತ್ರನು - "ನಾನು ಶೂನ್ಯನಿದ್ದೆ, ಸುಖದ ಹೊರತು ನಿದ್ರೆಯಲ್ಲಿ ಮತ್ತೇನೂ ತಿಳಿಯುತ್ತಿದ್ದಿಲ್ಲ," ಎಂದು ಉತ್ತರ ಕೊಟ್ಟನು. ಆಗ ದಯಾಪರರಾದ ಸಿದ್ಧಾರೂಢರು - "ಸಜ್ಜನನಾದ ಶಿವಪುತ್ರನೇ ಕೇಳು, ತಾನು ಇದ್ದೆ, ಅನ್ನುವದರಿಂದ ನೀನು ಸತ್, ಶೂನ್ಯವನ್ನು ತಿಳಿದಿಯಾದ್ದರಿಂದ ನೀನು ಚಿತ್, ಮತ್ತು ಸ್ವರೂಪಸುಖ ಮಾತ್ರ ಅನುಭವಿಸುತ್ತಿದ್ದಿಯಾದ್ದರಿಂದ ನೀನು

ಆನಂದನು. ಈ ಪ್ರಕಾರ ಸಚ್ಚಿದಾನಂದ ಸ್ವರೂಪವೇ ಇದ್ದಿ, ಇದೇ ನಿನ್ನ ನಿತ್ಯ ಸ್ವರೂಪವಿದ್ದು, ಅದಕ್ಕೆ ಪುಣ್ಯ ಪಾಪಗಳು ಹತ್ತುವದಿಲ್ಲ. ಅದೇ ಈ ಜಗದ್ರೂಪವಾಗಿ ಭಾಸಿಸುತ್ತಿದೆ. ನೀನು ಸದಾ ಚಿದ್ರೂಪನಿದ್ದಿ, ಜಡದೇಹವನ್ನು ನೀನು ತಿಳಿಯುತ್ತಿ, ಇಂದ್ರಿಯಗಳನ್ನು ಪ್ರೇರಿಸುವಂಥಾ ಪ್ರಾಣಕ್ಕಾದರೂ ನೀನು ಪ್ರೇರಿಸುತ್ತಿ, ಪ್ರಾಣದ ಚಲನಾದಿಗಳನ್ನು ಮನಸ್ಸಿನಿಂದ ತಿಳಿಯುತ್ತಿ. ಮನೋವೃತ್ತಿಗಳನ್ನು ಬುದ್ಧಿಯಿಂದ ಅರಿಯುತ್ತಿ, ಬುದ್ಧಿಯ ವ್ಯಾಪರಗಳಿಗಾದರೂ ನೀನು ಸ್ವತಃ ಸಾಕ್ಷಿಯಾಗಿದ್ದಿ. ಇಂಥಾ ಸಾಕ್ಷಿರೂಪದಿಂದ ನೀನು ಅಹೋರಾತ್ರಿ ವರ್ತಿಸುತ್ತಿರು. ಈ ಅಭ್ಯಾಸವನ್ನು ಎಂದೂ ಬಿಡಬೇಡ, ಅಖಂಡ ವೈರಾಗ್ಯ ವೃತ್ತಿಯಿಂದ ಇರುತ್ತ, ಯಾವಾಗಲೂ ದೇಹದಲ್ಲಿ ನಿರಭಿಮಾನನಾಗಿರು. ಇಂಥಾ ನಿರ್ವಿಕಾರ ಸ್ವರೂಪವೇ ತಾನೆಂದು ನಿತ್ಯ ತಿಳಿಯುವಂಥವನಾಗು. ಸರ್ವ ಕಾಲದಲ್ಲಿಯೂ ಇರಬೇಕಾಗಿರುವಂತಹ ಸ್ವರೂಪಧ್ಯಾನವನ್ನು ವಿಷಯಗಳ ಸಲುವಾಗಿ ಎಂದೂ ಬಿಡಬೇಡ, ವೇದಾಂತ ಚರ್ಚಾ, ಶ್ರವಣ, ಮನನ, ನಿದಿಧ್ಯಾಸನ ಇವುಗಳಲ್ಲೇ ಪ್ರವೃತ್ತಿ

ಇದ್ದು  ಕಾಲಹರಣ ಮಾಡುತ್ತಿರು," ಎಂದು ಅಂದ ವಚನ ಕೇಳಿದ ಕೂಡಲೇ, ಶಿವಪುತ್ರನ ಮನಸ್ಸು ಸ್ವರೂಪಾಕಾರವಾಗಿ, ಪೂರ್ಣ ಬ್ರಹ್ಮಾನಂದವು ಅನುಭವಕ್ಕೆ ಬಂತು. ಅನಂತರ ಎದ್ದು, ಪ್ರಾರ್ಥಿಸಿದ್ದೇನೆಂದರೆ, - 'ಹೇ ದಯಾಳುವಾದ ಸಿದ್ಧಾರೂಢನೇ, ನನ್ನ ಜನ್ಮವು ಸಾರ್ಥಕವಾಯಿತು. ನಿನ್ನ ಕೃಪೆಯಿಂದ ನನಗೆ ಆತ್ಮಾನುಭವವು ಪ್ರತೀತಿಯಾಯಿತು. ಈಗ ಅನನ್ಯಭಾವದಿಂದ ನಿನ್ನ ಚರಣದಲ್ಲಿ ಪ್ರಾರ್ಥಿಸುವದೇನೆಂದರೆ - ನನ್ನ ಮೇಲೆ ಕೃಪೆಯಿಂದ ಯೋಗ್ಯವಾದ ಸೇವೆಯನ್ನು ಕೊಟ್ಟು ಸದಾ ನಿನ್ನ ಚರಣಗಳಲ್ಲೆ  ಇರಗೊಡಬೇಕು." ಈ ಪ್ರಕಾರ ಪ್ರಾರ್ಥನೆಯನ್ನು ಕೇಳಿ, ಆನಂದಮೂರ್ತಿಯಾದ ಸದ್ಗುರುಗಳು, - "ನೀನು ಮಾಡತಕ್ಕ ಸೇವಾ ಕಾರ್ಯವು ಯಾವುದೆಂದರೆ - ಮುಮುಕ್ಷು ಜನರಿಗೋಸ್ಕರ ವೇದಾಂತ ಗ್ರಂಥವನ್ನು ಬಹು ಪ್ರೇಮದಿಂದ ನಿರೂಪಿಸಿತಕ್ಕದ್ದು. ಇಂಥಾ ಲೋಕೋದ್ಧಾರ ಕಾರ್ಯವನ್ನು ಆರಂಭಿಸುವ ನಿಶ್ಚಯವನ್ನು ಮಾಡು. ಆದ್ದರಿಂದ ಈ ನಿನ್ನ ಜ್ಞಾನವು ದೃಢವಾಗುವದು," ಎಂದು ಭಾಷಣ ಮಾಡಿದರು. ಆಗ ಶಿವಪುತ್ರನು ಗುರು

ಆಜ್ಞೆಯೇ ಪ್ರಮಾಣವೆಂದು ಆ ದಿವ್ಯ ಚರಣಗಳಲ್ಲಿ ಮಸ್ತಕವನ್ನಿಟ್ಟನು. ಅಂದಿನಿಂದ ಆತನು ಪ್ರತಿ ದಿನದಲ್ಲಿ ಗುರು ಸಮಕ್ಷಮದಲ್ಲಿ ಶಾಸ್ತ್ರ ವಿವರಿಸುವದಕ್ಕೆ ಪ್ರವರ್ತನಾದನು. ಆತನ ವೇದಾಂತ ವಿವೇಚನವನ್ನು ಕೇಳಿದ ಮಾತ್ರದಿಂದ ಶ್ರೋತಾ ಜನರಿಗೆ ಮನವು ಉನ್ನನವಾಗಿ, ವೃತ್ತಿ ತದಾಕಾರವಾಗಿ, ಗುರುಪಾದಗಳಲ್ಲಿ ಅವರು ಲೀನರಾಗಿ ಹೋಗುವರು. ಶಿವಪುತ್ರನು ರಚಿಸಿದ ವೇದಾಂತ ಚಂದ್ರಿಕೆ ಎಂಬ ವಿಚಾರಪರ ಗ್ರಂಥವು ಮುಮುಕ್ಷು ಜನರಿಗೆ ಬಹಳ ಉಪಯುಕ್ತವಾಗಿದ್ದು ಅದರೊಳಗೆ ಆತನ ಜ್ಞಾನ ಮತ್ತು ವಿಚಾರ ಶಕ್ತಿ ಪೂರ್ಣವಾಗಿ ಹೊಳೆಯುತ್ತದೆ. ಸದ್ಗುರುರಾಯನು ಧನ್ಯ ಧನ್ಯನು. ಜೀವನಿಗೆ ಈತನ ಕೃಪೆಯಿಂದ ಭವಭಯವು ನಾಶವಾಗುವದು. ಮತ್ತು ಜೀವಭಾವವು ಹೋಗಿ, ನಿರಾಮಯ ಸ್ವರೂಪವಾದ ಬ್ರಹ್ಮವೇ ತಾನಾಗುವನು. ಎಂಬಲ್ಲಿಗೆ, ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ ಅತಿ ಮಧುರವಾದ ಈ

*ನಾಲ್ವತ್ತೇಳನೇ ಅಧ್ಯಾಯವನ್ನು ಶಿವದಾಸನು ಶ್ರೀ ಸಿದ್ಧಾರೂಢ ಸದ್ಗುರುಗಳ ಚರಣಾರವಿಂದಗಳಲ್ಲಿ ಅರ್ಪಿಸಿರುವನು.*